ೆ
೨

## ಕರ್ನಾಟಕ ವಿಧಾನಪರಿಷತ್ತು

| | |
|---|---|
| 1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 192 (208) |
| 2. ಸದಸ್ಯರ ಹೆಸರು: | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| 3. ಉತ್ತರಿಸಬೇಕಾದ ದಿನಾಂಕ: | 18.08.2026 |
| 4. ಉತ್ತರಿಸಬೇಕಾದವರು: | ಮಾನ್ಯ ಮುಖ್ಯ ಮಂತ್ರಿಗಳು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕೃಷಿ ಅಧಿಕಾರಿ ಹಾಗೂ ಸಹಾಯಕ ಕೃಷಿ ಅಧಿಕಾರಿ ಹುದ್ದೆಗಳ ನೇಮಕಾತಿಗೆ ಜಾರಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳು ಯಾವುವು; ಅವುಗಳನ್ನು ಕೊನೆಯದಾಗಿ ಯಾವಾಗ ಪರಿಷ್ಕರಿಸಲಾಗಿದೆ; ಕೃಷಿ ಶಿಕ್ಷಣದಲ್ಲಿನ ಬದಲಾವಣೆ, ICAR, UGC,AICTE ಹಾಗೂ ಕೃಷಿ ವಿಶ್ವವಿದ್ಯಾಲಯಗಳ ಶಿಫಾರಸ್ಸುಗಳನ್ನು ಪರಿಗಣಿಸಿ ಯಾವುದೇ ಕೃಷಿ ಸಂಬಂಧಿತ ಹುದ್ದೆಗಳ ನೇಮಕಾತಿ ಕುರಿತಂತೆ ವಿಶೇಷತಜ್ಞರಿಂದ ವರದಿ ಪಡೆಯಲಾಗಿದೆಯೇ? | ಕೃಷಿ ಇಲಾಖೆಯ ಕೃಷಿ ಅಧಿಕಾರಿ ಹಾಗೂ ಸಹಾಯಕ ಕೃಷಿ ಅಧಿಕಾರಿ ಹುದ್ದೆಗಳನ್ನು ನೇಮಕಾತಿ ಮಾಡಲು ಸರ್ಕಾರದ ಅಧಿಸೂಚನೆ ಸಂಖ್ಯೆ:ಕೃಇ 42 ಕೃವಸೇ 2018, ದಿನಾಂಕ:15.05.2021ರಲ್ಲಿ ಕೃಷಿ ಇಲಾಖೆಯ (ವೃಂದ ಮತ್ತು ನೇಮಕಾತಿ) ನಿಯಮಗಳು, 2021 ಜಾರಿಯಲ್ಲಿರುತ್ತದೆ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ:AGRI 32 ANE 2021, ದಿನಾಂಕ:02.12.2022ರಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಿಸಲಾಗಿರುತ್ತದೆ.<br><br>ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಿಸುವ ಸಂದರ್ಭದಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ವೃಂದ ಮತ್ತು ನೇಮಕಾತಿ ಪರಿಶೀಲನಾ ಸಮಿತಿ ಅನುಮೋದನೆ ಪಡೆದು ತದನಂತರ, ಇಲಾಖಾ ಸಚಿವರ ಅನುಮೋದನೆಯೊಂದಿಗೆ ಸಚಿವ ಸಂಪುಟದ ನಿರ್ಣಯದೊಂದಿಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಹೊರಡಿಸಲಾಗಿದೆ. |
| ಆ | ಈ ಹುದ್ದೆಗಳಿಗೆ ಬಿ.ಎಸ್.ಸಿ (B.Sc) ಕೃಷಿ ಮತ್ತು ತೋಟಗಾರಿಕೆ. ಬಿ.ಟೆಕ್ ಕೃಷಿ ತಾಂತ್ರಿಕತೆ, ಬಿ.ಇ Biotechnology, ಬಿ.ಇಆಹಾರ ತಾಂತ್ರಿಕತೆ ಹಾಗೂ ಇತರೆ ಪದವಿಗಳನ್ನು ಅರ್ಹವೆಂದು ಪರಿಗಣಿಸಿರುವ ಬಗ್ಗೆ ವೈಜ್ಞಾನಿಕ, ತಾಂತ್ರಿಕ ಮತ್ತು ಕಾನೂನು ಆಧಾರಗಳೇನು: ಪ್ರತಿಯೊಂದು ವಿದ್ಯಾರ್ಹತೆಯನ್ನು ಕೃಷಿ | ವೃಂದ ಮತ್ತು ನೇಮಕಾತಿ ನಿಯಮಗಳು (ತಿದ್ದುಪಡಿ), 2022 ರನ್ವಯ ನೇರ ನೇಮಕಾತಿಯಲ್ಲಿ B.Tech (Food Science and Technology)/B.Tech (Food Technology) or B.Sc (Agriculture Marketing and Co-operation)/ B.Sc (Hons.) Agri Marketing and Co-operation / B.Sc (Hons.) Agri Business Management or B.Sc (Agri Bio-technology)/ B.Tech (Bio-technology) or B.Sc (Agricultural Engineering)/B.Tech (Agricultural Engineering). ವಿದ್ಯಾರ್ಹತೆಯನ್ನೊಳಗೊಂಡ ಅಭ್ಯರ್ಥಿಗಳಿಗೆ ಪ್ರತ್ಯೇಕವಾಗಿ ಶೇ.15ರಷ್ಟು |

| | | |
|---|---|---|
| | ಇಲಾಖೆಯ ಹುದ್ದೆಯ ಕರ್ತವ್ಯಗಳೊಂದಿಗೆ ಹೊಂದಾಣಿಕೆ ಮಾಡಲಾಗಿದೆಯೇ; | ಹುದ್ದೆಗಳನ್ನು ನಿಗದಿ ಪಡಿಸಲಾಗಿರುತ್ತದೆ.<br>ಸದರಿ ವಿದ್ಯಾರ್ಹತೆ ಹೊಂದಿದ ಅಭ್ಯರ್ಥಿಗಳನ್ನು ಇಲಾಖೆಯಲ್ಲಿ ಶಾಸನ ಬದ್ಧವಲ್ಲದ ಕರ್ತವ್ಯಗಳನ್ನು ನಿರ್ವಹಿಸಲು ಸ್ಥಳ ನಿಯುಕ್ತಿಗೊಳಿಸಲಾಗುವುದು. |
| ಇ | ಕೃಷಿ ವಿಸ್ತರಣಾ ಸೇವೆ, ಮಣ್ಣು ಪರೀಕ್ಷೆ, ಬೆಳೆ ಸಂರಕ್ಷಣೆ, ರಸಗೊಬ್ಬರ ನಿರ್ವಹಣೆ, ಕೀಟ ಮತ್ತು ರೋಗ ನಿರ್ವಹಣೆ, ರೈತರ ಸಲಹಾ ಸೇವೆಗಳಿಗೆ ICAR ನಿಯಮಾವಳಿಯಂತೆ ಈ ಮೇಲಿನ ಕೃಷಿ ಪದವೀಧರರು ಸೇವೆ ಸಲ್ಲಿಸಲು ಅರ್ಹತೆ ಹೊಂದಿದ್ದಾರೆಯೇ; | ಸದರಿ ವಿದ್ಯಾರ್ಹತೆ ಹೊಂದಿದ ಅಭ್ಯರ್ಥಿಗಳು ಇಲಾಖೆಯ ಮೂಲಕ ಅನುಷ್ಠಾನ ಮಾಡುವ ಶಾಸನಬದ್ಧ ಕರ್ತವ್ಯಗಳಾದ ಬೀಜ ಕಾಯ್ದೆ 1966, ರಸಗೊಬ್ಬರ (ನಿಯಂತ್ರಣ) ಆದೇಶ 1985 ಮತ್ತು ಕೀಟನಾಶಕ ಕಾಯ್ದೆ 1968ನ್ನು ಅನುಷ್ಠಾನ ಮಾಡಲು ಅರ್ಹತೆ ಹೊಂದಿರುವುದಿಲ್ಲ.<br><br>ಸದರಿ ವಿದ್ಯಾರ್ಹತೆ ಹೊಂದಿದ ಅಭ್ಯರ್ಥಿಗಳನ್ನು ಇಲಾಖೆಯಲ್ಲಿ ಶಾಸನಬದ್ಧವಲ್ಲದ ಸೇವೆಗಳನ್ನು ನಿರ್ವಹಿಸಲು ಸ್ಥಳ ನಿಯುಕ್ತಿಗೊಳಿಸಲಾಗುವುದು. |
| ಈ | KEA ಅಧಿಸೂಚನೆ ಹೊರಡಿಸುವ ಮೊದಲು ಕೃಷಿ ಇಲಾಖೆ, ಕೃಷಿ ವಿಶ್ವವಿದ್ಯಾಲಯಗಳು, ಕರ್ನಾಟಕ ಲೋಕಸೇವಾ ಆಯೋಗ, ಕಾನೂನು ಇಲಾಖೆ ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗಳೊಂದಿಗೆ ಕಡ್ಡಾಯ ಸಮಾಲೋಚನೆ ನಡೆಸಲಾಗಿತ್ತೇ; ಇಲ್ಲದಿದ್ದರೆ. ಅದಕ್ಕೆ ಕಾರಣವೇನು; | ಕೃಷಿ ಇಲಾಖೆಯು ಕೃಷಿ ವಿಶ್ವವಿದ್ಯಾಲಯಗಳು, ಕಾನೂನು ಇಲಾಖೆ, ಆರ್ಥಿಕ ಇಲಾಖೆ ಮತ್ತು ಸಿಬ್ಬಂದಿ & ಆಡಳಿತ ಸುಧಾರಣೆ ಇಲಾಖೆಗಳೊಂದಿಗೆ ಸಮಾಲೋಚನೆ ನಡೆಸಿ ಕೃಷಿ ಇಲಾಖೆಯ (ವೃಂದ ಮತ್ತು ನೇಮಕಾತಿ) ನಿಯಮಾವಳಿ, 2021 ಮತ್ತು ತಿದ್ದುಪಡಿ ನಿಯಮಗಳು 2022ನ್ನು ರಚಿಸಲಾಗಿರುತ್ತದೆ. ಇದರನ್ವಯ ಹಾಗೂ ಕೃಷಿ ಆಯುಕ್ತರಿಂದ ಸ್ವೀಕೃತವಾದ ಪ್ರಸ್ತಾವನೆಯ ಆಧಾರದ ಮೇಲೆ ಆಯ್ಕೆ ಪ್ರಾಧಿಕಾರದಿಂದ ನೇಮಕಾತಿ ಅಧಿಸೂಚನೆಯನ್ನು ಹೊರಡಿಸಲು ಕ್ರಮವಹಿಸಲಾಗಿದೆ. |
| ಉ | ಭವಿಷ್ಯದಲ್ಲಿ ಕೃಷಿ ಇಲಾಖೆಯಲ್ಲಿ ನೇಮಕಾತಿ ವಿವಾದಗಳನ್ನು ತಪ್ಪಿಸಲು ಸಮರ್ಪಕವಾಗಿ C&R RULES ಪರಿಷ್ಕರಣೆ ಮಾಡುವ ಬಗ್ಗೆ ಸರ್ಕಾರ ಯಾವಾಗ ನಿರ್ಧಾರ ಕೈಗೊಳ್ಳುವುದು? | ಪ್ರಸ್ತುತ ಕೃಷಿ ಅಧಿಕಾರಿ ಮತ್ತು ಸಹಾಯಕ ಕೃಷಿ ಅಧಿಕಾರಿ ವೃಂದದ ಹುದ್ದೆಗಳಿಗೆ ನಿಗದಿಪಡಿಸಿರುವ ವೃಂದ ಮತ್ತು ನೇಮಕಾತಿ ನಿಯಮಗಳ ಬಗ್ಗೆ ಹಲವು ಕೃಷಿ ಪದವೀಧರ ವಿದ್ಯಾರ್ಥಿಗಳಿಂದ ಮನವಿ/ಆಕ್ಷೇಪಣೆಗಳು ಸರ್ಕಾರದಲ್ಲಿ ಸ್ವೀಕೃತವಾಗಿರುವ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ: AGRI 433 AGS 2026, ದಿನಾಂಕ:07.08.2026 ರಲ್ಲಿ ಕೃಷಿ ಇಲಾಖೆಯ (ವೃಂದ ಮತ್ತು ನೇಮಕಾತಿ) ನಿಯಮಾವಳಿ 2021ನ್ನು ಪರಿಷ್ಕರಿಸಲು ಈ ಕೆಳಕಂಡಂತೆ ಸಲಹಾ ಸಮಿತಿ ರಚಿಸಿ, ಸರ್ಕಾರಕ್ಕೆ ವರದಿ ನೀಡುವಂತೆ ಆದೇಶಿಸಲಾಗಿರುತ್ತದೆ.<br><br>1. ಕೃಷಿ ಆಯುಕ್ತರು — ಸಮಿತಿ ಅಧ್ಯಕ್ಷರು<br>2. ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು — ಸದಸ್ಯರು |

<table>
<tr>
<td></td>
<td></td>
<td>
<table>
<tr><td></td><td></td><td></td></tr>
<tr><td>3.</td><td>ಕುಲಪತಿಗಳು,<br>ಕೃಷಿ ವಿಶ್ವವಿದ್ಯಾಲಯ,<br>ಧಾರವಾಡ</td><td>ಸದಸ್ಯರು</td></tr>
<tr><td>4.</td><td>ಕೃಷಿ ನಿರ್ದೇಶಕರು</td><td>ಸಮಿತಿಯ ಸದಸ್ಯ ಕಾರ್ಯದರ್ಶಿಗಳು</td></tr>
</table>
ಸದರಿ ಸಲಹಾ ಸಮಿತಿ ನೀಡುವ ವರದಿಯನ್ನಾಧರಿಸಿ ನಿಯಮಾನುಸಾರ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಿಸಲು ಕ್ರಮವಹಿಸಲಾಗುವುದು.
</td>
</tr>
</table>

P. N. Narendraswamy

(ನರೇಂದ್ರ ಸ್ವಾಮಿ)
ಕೃಷಿ ಸಚಿವರು

**ಸಂಖ್ಯೆ:AGRI 287 AGS 2026**